ಪೊಲೀಸರು ಅದನ್ನು ಟೋ ಮಾಡಿಕೊಂಡು ಯಾವುದೋ ಠಾಣೆಯ ಬಳಿ ಎಳೆದೊಯ್ದು ನಿಲ್ಲಿಸಿದರೆ? ಎರಡೂ ಕಾಲೆತ್ತಿ ಒದೆಯಬೇಕೆಂಬಷ್ಟು ಕೋಪ ನನಗೆ ಬಂದರೂ ಯಾರನ್ನೂ ಒದೆಯಲಾಗದ ನನ್ನ ಸಂಕಟವನ್ನು ಯಾರಿಗೆ ಹೇಳೋಣ?

'ದೀವಾರ್' ಸಿನಿಮಾದಲ್ಲಿ ಅಮಿತಾಭ್ ಬಚ್ಚನ್ ಮತ್ತು ಶಶಿಕಪೂರ್ ಸೋದರರ ವಿಶ್ವಪ್ರಸಿದ್ಧ ಡೈಲಾಗ್‌ನ ಹೊಸ ವಾಟ್ಸಾಪ್ ರೂಪ ಈ ಹಂತದಲ್ಲಿ ನೆನಪಿಗೆ ಬರುತ್ತದೆ. ಅಮಿತಾಭ್ ಸಿಟ್ಟಿನಿಂದ, ಕೊಬ್ಬಿನಿಂದ ತನ್ನ ಬಡಪಾಯಿ ತಮ್ಮನನ್ನು ಕೇಳುತ್ತಾನೆ: 'ನನ್ನ ಹತ್ರ ಹೋಂಡಾ ಸಿಟಿ ಇದೆ, ಜಾಗ್ವಾರ್ ಇದೆ, ಬೆಂಝ್ ಇದೆ, ಲಾಂಬೋರ್ಘಿನಿ ಇದೆ; ನಿನ್ನ ಹತ್ರ ಏನಿದೆ?' ಅಂತ.

ಅದಕ್ಕೆ ಶಶಿಕಪೂರ್ ಕೂಲಾಗಿ ಹೇಳುತ್ತಾನೆ: 'ನನ್ ಹತ್ರ ಪಾರ್ಕಿಂಗ್ ಜಾಗ ಇದೆ!' ಅಂತ.

ಖರೆ ಹೇಳಬೇಕೆಂದರೆ, ಪಕ್ಷಿರಾಜ ಗರುಡ ನನ್ನ ಬಾಲ್ಯದ ಅಂಗಳಕ್ಕೆ ಬಂದು ಮುಂಜಾನೆಯ ಕನಸನ್ನು ಹೇಗೆ ಹೈಜಾಕ್ ಮಾಡಿದ ಅನ್ನುವ ನಿಟ್ಟಿನಲ್ಲೇ ಕಥನವನ್ನು ಮುಂದಕ್ಕೆ ಕೊಂಡೊಯ್ಯಬೇಕಿತ್ತು. ಆದರೆ, ಹಾಗೆ ನೇರದಾರಿ ಎಂಬುದು ನಾನು ಹುಟ್ಟಿಬೆಳೆದ ಮಲೆನಾಡಿನಲ್ಲಿ ಎಲ್ಲೂ ಇಲ್ಲವೇ ಇಲ್ಲವಲ್ಲ. ಪಕ್ಷಿಗಳಿಗೂ ಅದೇನು ಹಟವೊ ನನ್ನಿಂದ ದೂರವಾಗಿದ್ದೇ ಇಲ್ಲ. ನಾನು ಊರು ಬಿಟ್ಟು ಅದೆಷ್ಟೇ ದೂರಕ್ಕೆ, ಎತ್ತರಕ್ಕೆ (ಅಂದರೆ, ಮೇಲಿನ ಅಂತಸ್ತಿಗೆ) ಹೋದರೂ ಅವು ನನ್ನ ಬೆನ್ನು ಬಿಟ್ಟಿಲ್ಲ. ನನಗೇನೂ ಪಕ್ಷಿವೀಕ್ಷಣೆಯಲ್ಲಿ ಅಂಥ ಘನಾಸಕ್ತಿ ಇಲ್ಲವಾದರೂ ನನ್ನ ಅನೇಕ ಫೋಟೊಗ್ರಫಿ ಮಿತ್ರರು ಕೆಂಗೇರಿ ಬಳಿಯ ನನ್ನ ಪುಟ್ಟ ತೋಟಕ್ಕೆ ನಸುಕಿನಲ್ಲಿ ಬಂದು ನನ್ನ ನಿದ್ರಾಭಂಗ ಮಾಡಿದ್ದುಂಟು. ಕಣ್ಣುಜ್ಜುತ್ತ ನಾನೂ ಬೈನಾಕ್ಯುಲರ್ ಹಿಡಿದು ಅವರನ್ನು ಸುತ್ತಲಿನ ಅನೇಕ ಕೆರೆದಂಡೆಗಳನ್ನು ಸುತ್ತಿಸಿದ್ದೂ ಉಂಟು. ತೋಟದಲ್ಲಿ ಗೆದ್ದಲು ಕಾಟವನ್ನು ನೀಗಿಸಲೆಂದು ಕೋಳಿಗಳನ್ನು ಸಾಕಲು ಹೋಗಿ, ಕೋಳಿಗೂಡಿನ ಮೊಟ್ಟೆಗಳನ್ನು ಗುಳುಂ ಮಾಡಲೆಂದು ನಾಗರಹಾವು ನುಗ್ಗಿ, ನಸುಕು ಹರಿಯುವ ಮುನ್ನವೇ ರಂಪಾಟ ಎದ್ದಿದ್ದೂ ಉಂಟು. ತೋಟದಲ್ಲಿ ಸಿಗ್ನಲ್ ಸಿಗಲೆಂದು ಬಿಎಸ್ಸೆನ್ನೆಲ್‌ಗೆ ದುಂಬಾಲು ಬಿದ್ದು ಎತ್ತರದ ಪ್ಲಾಸ್ಟಿಕ್ ಗಳುವಿನ ಮೇಲೆ ಅವರು ಕೊಟ್ಟ ಡಬ್ಬಿ ಕಟ್ಟಿ, ಅದರ ಮೇಲೂ ಬೇಟೆಗಾರ ಪಕ್ಷಿಗಳು ಬೆಳ್ಳಂಬೆಳಿಗ್ಗೆ ಬಂದು ಕೂತು ಬೀಳಿಸಿ ನನ್ನನ್ನು ಎಬ್ಬಿಸಿದ್ದೂ ಆಗಿದೆ. ಈಗಲೂ ನಾನಿರುವ ಈ ಅಪಾರ್ಟ್‌ಮೆಂಟಿನ ಸೂರಿನ ಮೇಲಿನ ನೀರಿನ ಟ್ಯಾಂಕ್ ಮೇಲೆ ಮುಂಜಾನೆಯೇ ದೊಡ್ಡ ಗಾತ್ರದ ಬಿಳಿಕತ್ತಿನ ಗಿಡುಗ ಬಂದು ಕೂರುತ್ತದೆ. ಅದು ಕೂರುವ ಮತ್ತು ಅಲ್ಲಿಂದ ನೆಗೆಯುವ ರಭಸಕ್ಕೆ ಅಲ್ಲಿ ಸಾಲಾಗಿ ಜೋಡಿಸಿದ ವೆಂಟ್‌ಕೊಳವೆಗಳು

